**OS. No.18/2016**
**D.W-2**

**( ದಿನಾಂಕ.25-11-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)**

**ಮುಂದುವರೆದ ಮುಖ್ಯ ವಿಚಾರಣೆಃ** ಶ್ರೀ.P.N.S. ವಕೀಲರಿಂದ

ನಾನು ಈಗಾಗಲೇ ಕೆಲವೊಂದು ದಾಖಲಾತಿಗಳನ್ನು ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು ಅವುಗಳನ್ನು DW-1 ರವರು ಸಾಕ್ಷಿ ವಿಚಾರಣೆಗೆ ಕಾಲಕ್ಕೆ ನಿಡಿ-1 ರಿಂದ 28 ದಾಖಲೆಗಳಾಗಿ ಗುರುತಿಸಿಕೊಂಡಿರುತ್ತಾರೆ. ಆ ಕಾರಣ ಸದರಿ ದಾಖಲೆಗಳನ್ನು ನಾನು ಅಳವಡಿಸಿಕೊಳ್ಳುತ್ತೇನೆ. ನಿಡಿ-6 ರಂತೆ ಪಾಂಡುರಂಗರವರು ನನಗೆ ಸರಳ ಅಡಮಾನ ಪತ್ರದ ನೋಂದಣಿ ದಾಖಲೆ ಮಾಡಿಕೊಟ್ಟಿದ್ದು ಅದರಲ್ಲಿ ಸಾಕ್ಷಿದಾರರು ಅಂತ ದತ್ತು, ರಾಮರೆಡ್ಡಿ ಮತ್ತು ಜಗದೇವಪ್ಪ ಎಂಬುವರು ಸಹಿ ಮತ್ತು ಹೆಬ್ಬಟ್ಟು ಮಾಡಿರುತ್ತಾರೆ. ನಾನು ಶಾಲೆಗೆ ಹೋಗದೆ ಇರುವ ಕಾರಣ ಓದಲು ಮತ್ತು ಬರೆಯಲು ಬರುವುದಿಲ್ಲ. ಆ ಕಾರಣ ನನಗೆ ಗುರುತಿಸಲು ಬರುವುದಿಲ್ಲ. ನಿಡಿ-6 ರಲ್ಲಿ ಪಾಂಡುರಂಗರಾವರ ಹಾಗೂ ನನ್ನ ಛಾಯಾಚಿತ್ರವನ್ನು ನಾನು ನೋಡಿ ಗುರುತಿಸುತ್ತೇನೆ. ಈಗಾಗಲೇ ಸದರಿ ಛಯಾಚಿತ್ರಗಳನ್ನು ನಿಡಿ-1(ಎ ಮತ್ತು ಬಿ) ಎಂದು ಗುರುತಿಸಲಾಗಿರುತ್ತದೆ. ಹಣಮಂತರಾವರು ಶಾಂತಪ್ಪರವರಿಗೆ ಕ್ರಯಕ್ಕೆ ಕೊಟ್ಟ ಮೂಲ ದಾಖಲೆಗಳನು ನೋಡಿ ಗುರುತಿಸಿದ್ದು, ಅದನ್ನು ನಿಡಿ-29 ಎಂದು ಗುರುತಿಸಲಾಯಿತು. ನಿಡಿ-29 ರಲ್ಲಿ ಸಾಕ್ಷಿ ತಮ್ಮ ತಮ್ಮನಾದ ಶಾಂತಪ್ಪ ಮತ್ತು ಹಣಮಂತರಾವರ ಛಾಯಾಚಿತ್ರಗಳನಜ್ನ ನೋಡಿ ಗುರುತಿಸಿದ್ದು ಅವುಗಳನ್ನು ತಕರಾರಿಗೆ ಒಳಪಟ್ಟು ಗುರುತಿಸಲಾಯಿತು.

ಅವುಗಳನ್ನು ನಿಡಿ-29( ಎ ಮತ್ತು ಬಿ) ಎಂದು ಗುರುತಿಸಲಾಯಿತು. 4 ಪಹಣಿಗಳನ್ನು ಕ್ರಮವಾಗಿ ನಿಡಿ-30 ರಿಂದ 33 ಎಂದು ಗುರುತಿಸಲಾಯಿತು.

ಆದ್ದರಿಂದ ವಾದಿಯರ ದಾವೆಯನ್ನು ವಜಾ ಮಾಡಬೇಕೆಂದು ಮಾನ್ಯ ನ್ಯಾಯಾಲಯಕ್ಕೆ ಪ್ರಾರ್ಥಿಸಿಕೊಳ್ಳುತ್ತೇನೆ.

ಪಾಟೀ ಸವಾಲುಃ ಕೋರಿಕೆ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಆಳಂದ**